ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 61-65
©*IIMRD*, Mysuru
IIMRD JOURNALS
www.iimrd.com

# ವನ್ಯಜೀವಿ ಸಂರಕ್ಷಣೆಯಲ್ಲಿ ಅರಣ್ಯವೀಕ್ಷಕರು ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಪಾತ್ರ: ಸಮಾಜಶಾಸ್ತ್ರೀಯ ವಿಶ್ಲೇಷಣೆ

**ಮಹೇಶ್ ಬಿ.ಎಸ್[1] ಮತ್ತು ಡಾ. ಆರ್. ಗೋಪಾಲರಾಜು[2]**

**ಪೀಠಿಕೆ**

ವನ್ಯಜೀವಿ ಸಂರಕ್ಷಣೆ ಮತ್ತು ಅರಣ್ಯ ಸಂರಕ್ಷಣೆಯು ವಿಶ್ವದಾದ್ಯಂತ ಹೆಚ್ಚು ಮಾನ್ಯತೆ ಪಡೆದಿರುವಂತಹ ಹಾಗೂ ಕಾಳಜಿ ಹೊಂದಿರುವಂತಹ ವಿಷಯವಾಗಿದೆ. ಏಕೆಂದರೆ ಮಾನವ ಜೀವಿಯ ಅಳಿವು ಮತ್ತು ಉಳಿವು ಅರಣ್ಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದೆ. ಈ ಕಾರಣದಿಂದಾಗಿಯೇ ಇಪ್ಪತ್ತೊಂದನೇ ಶತಮಾನದ ತಾಂತ್ರಿಕ–ನೈಪುಣ್ಯತೆಯ ಯುಗದಲ್ಲಿಯೂ ಅರಣ್ಯಗಳಿಗೆ, ವನ್ಯಜೀವಿಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಭೂ ಮಂಡಲದಲ್ಲಿ ವೈವಿಧ್ಯಮಯ ಭೂ ಪ್ರದೇಶಗಳಿದ್ದು ವಿವಿಧ ರೀತಿಯ ವನ್ಯಪ್ರದೇಶಗಳು–ವನ್ಯಜೀವಿಗಳಿರುವುದು ಸಾಮಾನ್ಯವೆನಿಸಿದರೂ ಅವುಗಳ ರಕ್ಷಣೆ, ಪಾಲನೆ ಮತ್ತು ಪೋಷಣೆ ಮಾನವ ಕುಲದ ಆದ್ಯ ಕರ್ತವ್ಯವಾಗಿದೆ. ಇಷ್ಟಾದರೂ ಪ್ರತಿದಿನ ಒಂದು ಸೆಕೆಂಡಿಗೆ ಅಂದಾಜು ಒಂದೂವರೆ ಎಕರೆ ಅರಣ್ಯ ನಾಶವಾಗುತ್ತಿರುವುದು ಸತ್ಯವೆನಿಸಿದೆ. ಕಾರಣ ನಗರೀಕರಣದ ಪ್ರಭಾವದಿಂದ 'ಅಭಿವೃದ್ಧಿ' ಎಂಬ ನಾಮಾಂಕಿತದಿಂದಾಗಿ ಅರಣ್ಯ ಪ್ರದೇಶಗಳ ಒತ್ತುವರಿ, ಅರಣ್ಯ ಸಂಪತ್ತಿನ ಲೂಟಿ ದಿನನಿತ್ಯ ನಿರಂತರವಾಗಿ ಜರುಗುತ್ತಿದೆ. ಈ ಕಾರಣದಿಂದಾಗಿ ವಾಯುಮಾಲಿನ್ಯ, ಜಲಮಾಲಿನ್ಯದಂತಹ ವಿಕೋಪಗಳಿಗೆ ಜಗತ್ತು ಬಲಿಯಾಗುತ್ತಿರುವುದು ಮಾತ್ರವಲ್ಲದೆ ಮನುಕುಲದ ನಾಶಕ್ಕೆ ಕಾರಣಭೂತವಾಗಿದೆ. ಇದೇ ನಿಟ್ಟಿನಲ್ಲಿ ನೋಡುವುದಾದರೆ ಜಲಪ್ರಳಯಗಳಿಂದಾಗಿ ಪ್ರತಿ ದಿನ 137 ಸಸ್ಯಗಳು, ಕೀಟಗಳು ನಾನಾರೀತಿಯ ಪ್ರಾಣಿಗಳು, ಪಶು–ಪಕ್ಷಿಗಳು ಕಣ್ಮರೆಯಾಗುತ್ತಿವೆ. ಅಧ್ಯಯನವೊಂದರ ಪ್ರಕಾರ ಪ್ರತಿವರ್ಷ ವಿವಿಧ ರೀತಿಯ 50,000 ಸಸ್ಯಗಳು ಪ್ರಾಣಿ, ಪಕ್ಷಿಗಳು ಶಾಶ್ವತವಾಗಿ ಕಾಣದಾಗುತ್ತಿವೆ. ಈ ನಿಟ್ಟಿನಲ್ಲಿ ಗಮನಹರಿಸಿದಾಗ ವನ್ಯಜೀವಿ ಸಂರಕ್ಷಣೆಯಲ್ಲಿನ ಪ್ರಾಮುಖ್ಯತೆ ಹಾಗೂ ವನ್ಯವೀಕ್ಷಕರ ಅಥವಾ ಅರಣ್ಯ ವೀಕ್ಷಕರ ಪಾತ್ರ ಬಹುಮುಖ್ಯವಾಗಿರುವುದು ಕಂಡುಬರುತ್ತದೆ. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಅರಣ್ಯ ಸಂರಕ್ಷಣೆಯಲ್ಲಿ ಅರಣ್ಯ ವೀಕ್ಷಕರ ಪಾತ್ರ

[1] *ಸಂಶೋಧಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

[2] *ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

ಮತ್ತು ವನ್ಯಜೀವಿ ಕಾಯ್ದೆ–1972 ರ ಮಹತ್ವತೆಯ ಬಗ್ಗೆ ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಲಾಗಿದೆ.

**ವನ್ಯಜೀವಿ**

ವನ್ಯಜೀವಿ ಎನ್ನುವುದು ಕಾಡು ಪ್ರಾಣಿಗಳನ್ನು ಹೆಸರಿಸಲು ಬಳಸುವ ಪದವಾಗಿದೆ. ಕಾಡಿನಲ್ಲಿ ವಾಸಿಸುವ ಎಲ್ಲಾ ಪ್ರಾಣಿಗಳನ್ನು ಒಳಗೊಂಡಂತಹ ಬಳಸುವ ಪದವೂ ಹೌದು. ಇಷ್ಟೆ ಅಲ್ಲದೆ ಕಾಡಿನಲ್ಲಿ ವಾಸಿಸುವ ಸಸ್ತನಿಗಳು, ಪಕ್ಷಿಗಳು, ಸರಿಸೃಪಗಳು, ಮೀನುಗಳು ಇತ್ಯಾದಿಗಳನ್ನು ಹೆಸರಿಸುವುದನ್ನು ಸಹ ಒಳಗೊಂಡಿರುವುದಾಗಿದೆ.

**ಅರಣ್ಯ ವೀಕ್ಷಕರು**

ಅರಣ್ಯ ಪ್ರದೇಶಗಳಲ್ಲಿನ ಜೈವಿಕ ಸಂಪನ್ಮೂಲಗಳ ಹಾಗೂ ಅವುಗಳ ಉಪ ಉತ್ಪನ್ನಗಳ ಸಂರಕ್ಷಣೆಯನಷ್ಟೆಯಲ್ಲದೆ, ಅರಣ್ಯಪ್ರದೇಶಗಳಲ್ಲಿನ ಕೆಳಸ್ತರರು ಪದರಗಳಲ್ಲಿ ಕಾರ್ಯನ್ಮುಖರಾಗಿರುವವರನ್ನು ಅರಣ್ಯ ವೀಕ್ಷಕರೆಂದು ಕರೆಯಬಹುದು.

**ಅರಣ್ಯ ವೀಕ್ಷಕರ ಪಾತ್ರ**

ಅರಣ್ಯ ವೀಕ್ಷಕರು ತಮ್ಮ ದೈನಂದಿನ ಜೀವನದಲ್ಲಿ ಅರಣ್ಯ ಸಂರಕ್ಷಣೆಯಲ್ಲಿ ನಿರ್ವಹಿಸುವ ಕಾರ್ಯಗಳನ್ನೇ ಅರಣ್ಯವೀಕ್ಷಕರ ಪಾತ್ರವೆಂದು ಉಲ್ಲೇಖಿಸಬಹುದಾಗಿದೆ. ನಿರೀಕ್ಷಿತ ನಡವಳಿಕೆ ಮತ್ತು ಕರ್ತವ್ಯಗಳನ್ನು ಇದು ಒಳಗೊಂಡಿದ್ದು ಅರಿವನ್ನು ಹೊಂದಿರುವುದರ ಜೊತೆಯಲ್ಲಿ ಸಾಮರ್ಥ್ಯವನ್ನು ರೂಪಿಸಿಕೊಳ್ಳುವುದಾಗಿದೆ. ಅರಣ್ಯವೀಕ್ಷಕರು ತಮ್ಮ ನಿರ್ವಹಣೆಯನ್ನು ಅರಿತುಕೊಂಡು ನಡೆಯುವುದಾಗಿರುವುದಷ್ಟೆ ಅಲ್ಲದೆ, ಉತ್ತಮ ಉದ್ದೇಶವನ್ನು ಹೊಂದಿರುವಂತಹುದು ಅವರ ಪಾತ್ರವನ್ನು ವ್ಯಕ್ತಪಡಿಸುವಂತದಾಗಿದೆ. ಪ್ರಸ್ತುತ ಲೇಖನದಲ್ಲಿ ಅರಣ್ಯ ವೀಕ್ಷಕರ ಪಾತ್ರವನ್ನು ಮಾರ್ಗದರ್ಶನ, ಯೋಜನೆ ಉದ್ದೇಶ, ನಿರ್ವಹಣೆ ಮತ್ತು ಮೌಲ್ಯ ಮಾಪನ ಕಾರ್ಯ ನಿರ್ವಹಣೆಯ ಅಂಶಗಳ ಆಧಾರದ ಹಿನ್ನಲೆಯಲ್ಲಿ ಗುರುತಿಸಲಾಗಿದೆ.

**ಅರಣ್ಯ ವೀಕ್ಷಕರ ಪಾತ್ರ ನಿರ್ವಹಣೆ**

ಅರಣ್ಯ ವೀಕ್ಷಕರು ತನ್ನ ಗಸ್ತಿನ ಸರಹದ್ದು ಮತ್ತು ಗಡಿಯನ್ನು ಚೆನ್ನಾಗಿ ಅರಿತವನಾಗಿದ್ದು, ಅರಣ್ಯಗಳು ಒತ್ತುವರಿಯಾಗದಂತೆ ಹಾಗೂ ಬೆಂಕಿ ಅಥವಾ ಇತರ ಕಾರಣಗಳಿಂದ ಉಂಟಾಗುವ ಅಪಾಯದಿಂದ ಅರಣ್ಯವನ್ನು ರಕ್ಷಿಸುವವರಾಗಿದ್ದು, ಅರಣ್ಯ ಅಪರಾಧಗಳನ್ನು ತಡೆಗಟ್ಟಲು ತನ್ನ ಸರಹದ್ದಿನ ಅರಣ್ಯ ಪ್ರದೇಶಗಳಲ್ಲಿ ನಿರಂತರವಾಗಿ ಸಂಚರಿಸುತ್ತಾ ಅರಣ್ಯ ಅಪರಾಧಗಳೇನಾದರೂ ಕಂಡುಬಂದರೆ ಪ್ರಥಮ ಮಾಹಿತಿ ವರದಿಯನ್ನು ತಕ್ಷಣವೇ ಅರಣ್ಯ ರಕ್ಷಕರಿಗೆ ತಿಳಿಸುವುದು ನೈಜ ಕರ್ತವ್ಯವಾಗಿದೆ. ಆದುದರಿಂದಲೇ ಅರಣ್ಯಗಳ ಸ್ಥಿತಿಗತಿಗಳು ಅರಣ್ಯ ವೀಕ್ಷಕರ ಕೆಲಸದ ದಕ್ಷತೆಯ ಕೈಗನ್ನಡಿಯಾಗಿದೆ ಎಂದು ಹೇಳಲಾಗುತ್ತದೆ.

ಅರಣ್ಯ ವೀಕ್ಷಕರು ತಮ್ಮ ವ್ಯಾಪ್ತಿಯ ಹಾಗೂ ಅಕ್ಕ–ಪಕ್ಕದ ಪ್ರದೇಶಗಳ ಮತ್ತು ಅರಣ್ಯ ಭೂ ಪ್ರದೇಶಗಳ ಗಡಿರೇಖಾ ಗುರುತುಗಳನ್ನು ಕ್ರಮಾನುಸಾರವಾಗಿ ನೈಜ ರೀತಿಯಲ್ಲಿ ಕಾಯ್ದುಕೊಳ್ಳುವುದು ಕೂಡ ಇವರ ವಸ್ತುನಿಷ್ಠ ಪಾತ್ರವಾಗಿದೆ ಎನ್ನಬಹುದು. ಅರಣ್ಯದ ಅಕ್ಕ–ಪಕ್ಕಗಳಲ್ಲಿರುವಂತಹ ಗ್ರಾಮೀಣ ಜನತೆ ದೈನಂದಿನ ಜೀವನೋಪಾಯಕ್ಕಾಗಿ ಅರಣ್ಯದಿಂದ ಕಾನೂನು ರೀತಿ ತಮ್ಮ–ತಮ್ಮ ಹಕ್ಕುಗಳನುಸಾರವಾಗಿ ಸಂಗ್ರಹಿಸಬಹುದುದಾದ ಕಾಡಿನ ಉನ್ಪನ್ನಗಳ ಇವೆ. (ಜೇನು, ದೂಪ, ಕಟ್ಟಿಗೆ) ಮೊದಲಾದವನ್ನು ಮಿತಿ ಮೀರಿದಂತೆ ಗಮನಹರಿಸುವುದುದಲ್ಲದೆ, ಕಾನೂನಿನ ಉಲ್ಲಂಘನೆಯಾಗದಂತೆ ಗಮನಹರಿಸುವುದು ಕಾಯೋನ್ಮಖ ಪಾತ್ರವಾಗಿದೆ. ಇದಲ್ಲದೆ ಅರಣ್ಯಗಳಲ್ಲಿ ಎರಡನೆ ಪೀಳಿಗೆಯ ಸಸಿಗಳನ್ನು ಹೆಚ್ಚಾಗಿ ಬೆಳೆಸುವುದಲ್ಲದೆ ಅವುಗಳಿಗೆ ದಕ್ಕೆಯಾಗದಂತೆ ನಾಮಫಲಕಗಳ ವ್ಯವಸ್ಥೆ ಮಾಡುವುದು ಮತ್ತು ಅರಣ್ಯದಂಚಿನ ಗ್ರಾಮಸ್ಥರ ಧನ–ಕರುಗಳಿಗಾಗಿ ಯಾವ–ಯಾವ ಪ್ರದೇಶಗಳು ಮುಕ್ತವಾಗಿವೆ ಅಥವ ಮುಕ್ತವಾಗಿಲ್ಲ, ಮತ್ತು ಯಾವ ಸಂಧರ್ಭಗಳಲ್ಲಿ ಅರಣ್ಯದ ಒಳಗಡೆ ಪ್ರವೇಶಾತಿ ನಿರ್ಗಮನಗಳ ಬಗ್ಗೆ ಗ್ರಾಮಸ್ಥರಿಗೆ ಸಮಯಾನುಸಾರ ಮನದಟ್ಟು ಮಾಡಿಕೊಡುವುದು ಕೂಡ ಅರಣ್ಯ ವೀಕ್ಷಕರ ಪಾತ್ರವಾಗಿದೆ. ಗ್ರಾಮಸ್ಥರ ಮತ್ತು ಅರಣ್ಯಧಿಕಾರಿಗಳ ಮದ್ಯ ಸೇತು ಬಂಧುವಾಗಿ ಕೆಲಸ ನಿರ್ವಹಿಸಬೇಕಾಗಿರುವುದು. ಅರಣ್ಯ ವೀಕ್ಷಕರ ಆದ್ಯ ಕರ್ತವ್ಯ. ಅರಣ್ಯ ಸಂಪನ್ಮೂಲಗಳ ತಪಾಸಣೆ ಮತ್ತು ಕಾನೂನುಬಾಹಿರ ಕೃತ್ಯಗಳು ಜರುಗದಂತೆ ತಪಾಸಣೆ ಮತ್ತು ರಕ್ಷಣೆಗೆಳೆರಡನ್ನು ನಿಭಾಯಿಸುವ ಜವಬ್ದಾರಿ ಅರಣ್ಯ ವೀಕ್ಷಕರದ್ದಾಗಿದೆ.

ಅರಣ್ಯಗಳಲ್ಲಿ ಪದೇ ಪದೇ ಕಂಡುಬರುವ ಅಗ್ನಿ ಅನಾಹುತಗಳ ಬಗ್ಗೆ ಎಚ್ಚರಿಕೆ ಮತ್ತು ಮುಂಜಾಗರೂಕತೆಯನ್ನು ಹೊಂದಿರಬೇಕು. ಅರಣ್ಯದಂಚಿನ ಗ್ರಾಮಸ್ಥರ ಬಗ್ಗೆ ಸಾಮಾಜಿಕ ಕಾಳಜಿಯನ್ನು ಹೊಂದಿರುವುದಲ್ಲದೆ, ಗ್ರಾಮಸ್ಥರಲ್ಲಿನ ಸಂಬಂದವನ್ನು ಹೊಂದಿದ್ದು ಅವರಲ್ಲಿ ಒಬ್ಬರಾಗಿ ಗುರುತಿಸಿಕೊಳ್ಳುವುದು ಕೂಡ ಅರಣ್ಯ ವೀಕ್ಷಕರ ಆದ್ಯ ಕರ್ತವ್ಯವು ಹೌದೆನ್ನಲಾಗಿದೆ. ಅರಣ್ಯ ವೀಕ್ಷಕರ ಪ್ರಮುಖ ಪಾತ್ರಗಳಲ್ಲಿ ಕಂಡು ಬರುವ ನಿರ್ವಹಣಾ ಅಂಶವೆಂದರೆ ಅರಣ್ಯ ಕೃಷಿಗೆ ಸಂಬಂದಿಸಿದಂತಹ ಕಾರ್ಯಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು (ಅರಣ್ಯದಲ್ಲಿ ಬೀಜ, ಸಸಿ ನೆಡುವುದು, ನಡು ತೋಪುಗಳ ನಿರ್ವಹಣೆ, ನರ್ಸರಿಗಳ ಅಭಿವೃದ್ಧಿ, ಇತ್ಯಾದಿ.,)

ಅರಣ್ಯ ವೀಕ್ಷಕರ ಕಾರ್ಯ ನಿರ್ವಹಣೆಯಲ್ಲಿ ಕೇವಲ ಅರಣ್ಯ ಪಾಲನೆ, ನಿರ್ವಹಣೆ, ಪೋಷಣೆಗಳಷ್ಟೆ ಅಲ್ಲದೆ, ಸ್ಥಳೀಯ ಪ್ರಾಣಿ ಪಕ್ಷಿಗಳ ಚಲನವಲನಗಳ ಗಮನಹರಿಸುವಿಕೆಯು ಪ್ರಧಾನವಾದದ್ದೆನ್ನಲಾಗಿದೆ. ಅರಣ್ಯಧಿಕಾರಿಗಳ ಹಾಗೂ ವೀಕ್ಷಕರ ವಿಶ್ರಾಂತಿ ಧಾಮಗಳ ನಿರ್ವಹಣೆಯು ಮುಖ್ಯವಾಗಿದ್ದು, ತನ್ನ ಮೇಲಾಧಿಕಾರಿಗಳ ನಿರ್ದೇಶನದಂತಹ ಕಾರ್ಯನಿರ್ವಹಣೆಯಲ್ಲೂ ಎಚ್ಚರಿಕೆಯಿಂದಿರಬೇಕಾಗುತ್ತದೆ.

**ವನ್ಯಜೀವಿ ಸಂರಕ್ಷಣಾ ಕಾಯ್ದೆ–1972**

ಪ್ರಾಣಿಗಳು, ಪಕ್ಷಿಗಳು, ಸಸ್ಯಗಳು ಮತ್ತು ಅದರೊಂದಿಗೆ ಸಂಪರ್ಕ ಹೊಂದಿದ ವಿಷಯಗಳನ್ನು ಸಂರಕ್ಷಿಸುವ ಸಲುವಾಗಿ ವನ್ಯಜೀವಿ ಕಾಯಿದೆಯನ್ನು 1972ರಲ್ಲಿ ಭಾರತ ಸರ್ಕಾರವು ಜಾರಿಗೆ ತಂದಿತು. (ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತು ಪಡಿಸಿ) ಕಾಯಿದೆ ಅನ್ವಯ ಕಾಡುಪ್ರಾಣಿಗಳ, ಪಕ್ಷಿಗಳ ಮತ್ತು ಸಸ್ಯಗಳ ರಕ್ಷಣೆಗಾಗಿ ಮತ್ತು ಅರಣ್ಯಕ್ಕೆ ಸಂಬಂಧಿಸಿದ ಅಥವಾ ಪೂರಕ ಅಥವಾ ಪ್ರಾಸಂಗಿಕ ವಿಷಯಗಳ ರಕ್ಷಣೆಗಾಗಿ ಈ ಕಾಯಿದೆಯನ್ನು ಜಾರಿಗೆ ತರಲಾಗಿದೆ.

**ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅವಶ್ಯಕತೆ**

ಪರಿಸರದ ಒಂದು ಭಾಗವಾಗಿರುವ ವನ್ಯಜೀವಿ ರಾಷ್ಟ್ರದ ಸಂಪತ್ತಾಗಿದೆ. ಇದು ಕಾಡು ಪ್ರಾಣಿಗಳು, ಪಕ್ಷಿಗಳು, ಸಸ್ಯಗಳು ಇತ್ಯಾದಿಗಳ ರಕ್ಷಣೆಯನ್ನು ಒಳಗೊಂಡಿದೆ. ಮನುಷ್ಯನು ತನ್ನ ಪ್ರಗತಿ ಮತ್ತು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮತ್ತು ತನ್ನ ಸ್ವಾರ್ಥ ಉದ್ದೇಶಗಳಿಗಾಗಿ ಕಾಡಿನ ವನ್ಯಜೀವಿಗಳಿಗೆ ಹೆಚ್ಚಿನ ಹಾನಿಯನ್ನುಂಟು ಮಾಡುತ್ತಿದ್ದಾನೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಪ್ರಕಾರ ಪಟ್ಟಿಮಾಡಿದ ಸಂರಕ್ಷಿಸಲ್ಪಡುವ ಮತ್ತು ಅಮೂಲ್ಯವಾದ ಹಲವು ಜಾತಿ ಸಸ್ಯ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ್ದಾಗಿದ್ದು ಪರಿಸರ ಸಂರಕ್ಷಣೆಯನ್ನು ಕಾಪಾಡಿಕೊಳ್ಳುವುದು ಅತ್ಯವಶ್ಯವಾದದ್ದು. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯು ಯಾವುದೇ ಪ್ರದೇಶವನ್ನು ವನ್ಯಜೀವಿ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನ ಪ್ರದೇಶವೆಂದು ಘೋಷಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುತ್ತದೆ. 1972 ವನ್ಯಜೀವಿ ಸಂರಕ್ಷಣಾ ಕಾಯ್ದೆಯು ವನ್ಯ ಅಧಿಕಾರಿಗಳು ಕಾರ್ಯನಿರ್ವಹಣೆಗೊಳಿಸಲು ಪೂರಕವಾಗುತ್ತದೆ. ಕಾಡು ಪ್ರಾಣಿಗಳ ಬೇಟೆಯನ್ನು ನಿಯಂತ್ರಿಸುವುದಲ್ಲದೆ. ನಿರ್ದಿಷ್ಟಪಡಿಸಿದ ಹಲವು ಮುಖ್ಯ ಸಸ್ಯಗಳನ್ನಲ್ಲದೆ ನಿಯಮಿತ ಪ್ರದೇಶಗಳನ್ನು ಕಾಯ್ದುಕೊಳ್ಳಲು ಅಭಯಾರಣ್ಯಗಳನ್ನು ಸಂರಕ್ಷಿಸಲು, ರಾಷ್ಟ್ರೀಯ ಉದ್ಯಾನಗಳನ್ನು ಅಭಿವೃದ್ಧಿಪಡಿಸಲು, ಕಾಡುಪ್ರಾಣಿಗಳ ಕಳ್ಳಮಾರಟವನ್ನು ತಡೆಗಟ್ಟಲು, ಅರಣ್ಯಸಂಪತ್ತಿನ ಲೂಟಿಯನ್ನು ಮಟ್ಟಹಾಕಲು ಮತ್ತು ವನ್ಯ ಜೀವಿಗಳ ಆಕಸ್ಮಿಕ ತೊಂದರೆಗಳನ್ನು ನಿವಾರಿಸಲು ಹಾಗೂ ಆ ಪ್ರಾಣಿಗಳ ಆರೋಗ್ಯ ಪಾಲನೆಯನ್ನು ನಿರ್ವಹಿಸಲು ಪೂರಕವಾಗಿರುವ ಈ ವನ್ಯಜೀವಿ ಸಂರಕ್ಷಣಾ ಕಾಯ್ದೆಯೇ ವನ್ಯಪ್ರಾಣಿಗಳನ್ನು ಕಾನೂನು ಬಾಹಿರವಾಗಿ ಬೇಟೆಯಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ನಿಷೇಧಿಸಲು 1972 ವನ್ಯಜೀವಿ ಸಂರಕ್ಷಣಾ ಕಾಯ್ದೆ ಸಹಾಯಕವಾಗಿದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಅಳಿವಿನಂಚಿನಲ್ಲಿನ ಹಲವು ವನ್ಯಪ್ರಾಣಿಗಳಿಗೆ ಮತ್ತು ವನ್ಯ ಸಸಿಗಳಿಗೆ ಸಂಪೂರ್ಣ ರಕ್ಷಣೆಯನ್ನು ನೀಡುವುದರಲ್ಲಿ ಅರಣ್ಯ ವೀಕ್ಷಕರು ಮತ್ತು ವನ್ಯಜೀವಿ

ಸಂರಕ್ಷಣಾ ಕಾಯ್ದೆ–1972ರ ಪಾತ್ರ ಮಹತ್ತದ್ದಾಗಿದೆ. ಇದು ಪ್ರಾಣಿಗಳು ಮತ್ತು ಸಸ್ಯಗಳಿಗೆ ರಕ್ಷಣೆ ನೀಡುವುದಷ್ಟೇ ಅಲ್ಲದೆ ಭದ್ರತೆಯನ್ನು ನೀಡುವಲ್ಲಿ ಸಹಕಾರಿಯಾಗಿದೆ. 1972ರ ಕಾಯ್ದೆಯ ಪ್ರಕಾರ ಸಂರಕ್ಷಿಸಲ್ಪಟ್ಟ ವನ್ಯ ಜೀವಿವಲಯಗಳಲ್ಲಿ ಅಕ್ರಮವಾಗಿ ಬೇಟೆಯಾಡುವುದನ್ನು ನಿಷೇಧಿಸುವುದಲ್ಲದೆ, ಬೇಟೆಯಾಡಲು ನೀಡಿರುವ ಪರವಾನಗಿಯನ್ನು ಕೆಲವೊಂದು ಸಂಧರ್ಭಗಳಲ್ಲಿ ರದ್ದುಪಡಿಸಲು ಅರಣ್ಯಾಧಿಕಾರಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ವನ್ಯಜೀವಿ ಅಭಯರಣ್ಯಗಳಲ್ಲಿ ಸಂರಕ್ಷಿತ ಉಧ್ಯಾನವನಗಳ ಸ್ಥಾಪನೆಗೂ ಮತ್ತು ಹಲವು ಉಪಯುಕ್ತ ಸಸ್ಯಜೀವಿಗಳ ಪಾಲನೆ ಪೋಷಣೆ, ಭದ್ರತೆಗೂ ಕೂಡ ಈ ಕಾಯಿದೆ ಅನುವು ಮಾಡಿಕೊಡುತ್ತದೆ. ವನ್ಯಜೀವಿ ಸಂರಕ್ಷಣಾ ಕಾಯಿದೆಯ ಉಲ್ಲಂಘನೆ ಮಾಡಿದವರ ಹಾಗೂ ತಪ್ಪಿತ್ತಸ್ಥರೆಂದು ಗುರುತಿಸಲ್ಪಟ್ಟವರ ವಿರುದ್ದವೂ ಪ್ರಕರಣವನ್ನು ದಾಖಲಿಸಲು ಮತ್ತು ರಕ್ಷಣೆ ಒಳಪಡಿಸಲು ಈ ಕಾಯಿದೆಯು ಸಹಾಯಕವಾಗಿದೆ. ಇದಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೆಲವೊಂದು ಪ್ರದೇಶಗಳನ್ನು ಅಭಯಾರಣ್ಯವೆಂದು ಮತ್ತು ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲು ಈ ಕಾಯಿದೆಯು ಅಧಿಕಾರವನ್ನು ನೀಡಿದೆ.

**ಪರಾಮರ್ಶನ ಗ್ರಂಥಗಳು**


- ಭಾರತ ವಿಶೇಷ ರಾಜಪತ್ರ (ಆಗಷ್ಟ್ 4, 2011). ವನ್ಯಜೀವಿ ಸಂರಕ್ಷಣಾ ಅಧಿನಿಯಮ 1972. ಸಂ.3, ಅರಣ್ಯ ಇಲಾಖೆ, ಅರಣ್ಯ ಭವನ, ಬೆಂಗಳೂರು. ಪು.ಸಂ. 215– 309.
- ನಾಯಕ್ ಎನ್.ಎಂ (ಡಿಸೆಂಬರ್ 2016): ಅರಣ್ಯಾಧಿಕಾರಿಗಳ ಕಾನೂನಿನ ಕೈಪಿಡಿ: ಅರಣ್ಯ ಇಲಾಖೆ, ಅರಣ್ಯ ಭವನ, ಬೆಂಗಳೂರು.
- City honors fallen watchers of forests. (Sept 11, 217). The Indian Express, Banglore.
- Forest quards leave job in droves, thanks to poor working conditions. (October 18, 2016). Assiant News, Banglore.
- Madhusudhan M.D and Pavithra Shankaran. (December 31, 2010). Forest watchers left to their lonely vigil. The Indian Express, Banglore.
- Pavan Kumar H. (November 27, 2017). Gurdian of the forest, Deccan Herald, Bangalore.
- Sanjay Gubbi (2011). Watchers of the forest. Deccan Herald, Bangalore.